## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಭಾಗವಹಿಸುವಿಕೆಯ ನಗರಾಭಿವೃದ್ಧಿ ಯೋಜನೆ (Participatory Town Development Scheme) ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:** 1. 2017–18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:330.
2. ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ:12/2018ರ ನಿರ್ಣಯ ದಿನಾಂಕ: 02.01.2018.

ಕ್ರಮ ಸಂಖ್ಯೆ 7835 ದಿನಾಂಕ 19/2/18 ಬೆಂಗಳೂರು

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ರಾಜ್ಯ ಸರ್ಕಾರದ 2017–18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:330ರಲ್ಲಿ, ಮಾನ್ಯ ಮುಖ್ಯಮಂತ್ರಿಯವರು 'ಸಾರ್ವಜನಿಕ ಸಹಭಾಗಿತ್ವದಲ್ಲಿ ನಗರಾಭಿವೃದ್ಧಿ ಯೋಜನೆ ಪರಿಚಯಿಸುವ' ಕುರಿತು ಘೋಷಿಸಿರುತ್ತಾರೆ.

ಅದರಂತೆ, ನಗರಾಭಿವೃದ್ಧಿ ಇಲಾಖೆಯು ಈ ಕೆಳಕಂಡ ಉದ್ದೇಶಗಳ ಆಧಾರದ ಮೇಲೆ ಪ್ರಸ್ತಾವನೆ ಸಿದ್ಧಪಡಿಸಿ, ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿರುತ್ತದೆ.

1. ಮಹಾಯೋಜನೆಯ ತಯಾರಿಕೆಯಲ್ಲಿನ ವಿಳಂಬವನ್ನು ತಪ್ಪಿಸಿ, ಸಂಕೀರ್ಣತೆಯನ್ನು ಕಡಿಮೆ ಮಾಡಿ, ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಿ, ಪ್ರಜಾಸತ್ತಾತ್ಮಕವಾಗಿ ನಾಗರೀಕರ ಪಾಲ್ಗೊಳ್ಳುವಿಕೆಯೊಂದಿಗೆ ಕಾರ್ಯರೂಪಕ್ಕೆ ತರುವುದು ಈ ಪ್ರಸ್ತಾವನೆಯ ಪ್ರಮುಖ ಅಂಶವಾಗಿದೆ.
2. ನಾಗರೀಕರಿಗೆ ನಗರ ಯೋಜನಾ ತಯಾರಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು.
3. ಮಹಾಯೋಜನೆಯ ತಯಾರಿಕೆಯ ಪ್ರಾಥಮಿಕ ಹಂತದಲ್ಲಿ ನಾಗರೀಕರನ್ನು ತಲುಪಿ ಅವರು ವೈಯಕ್ತಿಕವಾಗಿ ಸಲಹೆ ಸೂಚನೆಗಳನ್ನು ನೀಡುವಂತೆ ತೊಡಗಿಸಿಕೊಳ್ಳುವುದು.
4. ಪ್ರತಿ ಭೂಮಿ, ನಿವೇಶನ ಹಾಗೂ ಮನೆಗಳ ಮಾಲೀಕರಿಂದ ನಗರದ ಪ್ರದೇಶಗಳನ್ನು ಹೇಗೆ ಬೆಳೆಸಬೇಕು, ಭೂಮಿಯ ಬಳಕೆಯನ್ನು ಯಾವುದಕ್ಕಾಗಿ ಮಾಡಬೇಕು, ವಸತಿಯಿಂದ ವಾಣಿಜ್ಯ ಉದ್ದೇಶಕ್ಕೆ ಹೇಗೆ ಪರಿವರ್ತಿಸಬೇಕು, ವಿಸ್ತರಿಸಬೇಕಾದ ಸೌಕರ್ಯಗಳ ಸ್ವರೂಪ ಇತ್ಯಾದಿಗಳನ್ನು ಪರಿಗಣಿಸಿ ಯೋಜನೆ ತಯಾರಿಸುವುದು.
5. ಯೋಜನಾ ಅಧಿಕಾರಿಯ ವ್ಯಕ್ತಿನಿಷ್ಠ ತೀರ್ಮಾನಕ್ಕಿಂತ, ಭೂಬಳಕೆಯ ಬಗ್ಗೆ ಮೂಲ ತೀರ್ಮಾನ, ತರ್ಕಬದ್ಧ ತತ್ವಗಳನ್ನು ಆಧರಿಸಿ ಉದ್ದೇಶಿತ ಮಾನದಂಡಗಳನ್ನು ಅಳವಡಿಸಿಕೊಳ್ಳುವುದರ ಮುಖಾಂತರ ವಾಸ್ತವ ಅಂಶಗಳನ್ನು ಪರಿಗಣಿಸಿದ ವಸ್ತು ನಿಷ್ಠ ತೀರ್ಮಾನವಾಗಬೇಕು. ವಸ್ತುನಿಷ್ಠ ಮಾನದಂಡ ಆಧಾರಿತ ನಿರ್ಧಾರಗಳು ಸಾಧ್ಯವಾಗದ ಪಕ್ಷದಲ್ಲಿ ನಾಗರೀಕರ ಮತ್ತು ಪಾಲುದಾರರ ಸಾಮೂಹಿಕ ಆಯ್ಕೆಗಳು ನಿರ್ಣಾಯಕ ಅಂಶಗಳಾಗಿರಬೇಕು.
6. ಭೂ ಬಳಕೆಯ ಆಯ್ಕೆಗೆ ಮತ್ತು ಭೂಮಿಯ ಮಿಶ್ರ ಬಳಕೆಗೆ ಸಂಬಂಧಿಸಿದಂತೆ ಅಥವಾ ಪ್ರತ್ಯೇಕ ಭೂ ಬಳಕೆ ಪ್ರದೇಶವನ್ನು ಇರಿಸಿಕೊಳ್ಳುವ ಬಗ್ಗೆ ಸ್ಥಳೀಯ ನೆರೆಹೊರೆಯ ನಾಗರೀಕರನ್ನು ಮತ್ತು ವಾರ್ಡ್ ಸಮಿತಿಗಳನ್ನು ಒಳಗೊಂಡಂತೆ ತೀರ್ಮಾನಿಸಬೇಕು.
7. ನಾಗರೀಕರ ಸಲಹೆಗಳಿಗೆ ಆದ್ಯತೆ ನೀಡುವಂತೆ ಮತ್ತು ಅವರ ಸಲಹೆಗಳನ್ನು ಮಹಾಯೋಜನೆಯಲ್ಲಿ ಅಳವಡಿಸುವಂತೆ ಮಾಡುವ ನಾಗರೀಕರ ಸಲಹಾ ಶೋಧನಾ ಗುಂಪನ್ನು ರಚಿಸುವುದು.

..2..

17/2/18

8. ಪಾಲುದಾರರ ಉಪಸ್ಥಿತಿಯಲ್ಲಿ ಕರಡು ಮಹಾಯೋಜನೆಗೆ ಆಕ್ಷೇಪಣೆಗಳ ವಿಲೇವಾರಿ ಮಾಡುವುದು.

9. ಸರಿ ಹೊಂದುವ ಮಹಾಯೋಜನೆಯ ತಯಾರಿಕೆ ಅಥವಾ ಪರಿಷ್ಕರಣೆಗೆ ಪ್ರತಿಕ್ರಿಯೆ ಪಡೆಯುವುದು ಮತ್ತು ಮೌಲ್ಯ ಮಾಪನ.

ಹೊಂದಾಣಿಕೆಯ ದೃಷ್ಟಿಯಿಂದ ಮಹಾಯೋಜನೆಯಿಂದ ಸೂಕ್ಷ್ಮ ಯೋಜನೆಗಳನ್ನು ಪ್ರಸ್ತಾವಿಸಿದ ನಗರಗಳಲ್ಲಿ ಈ ಭಾಗವಹಿಸುವಿಕೆಯ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ:12/2018, ದಿನಾಂಕ: 02.01.2018ರಲ್ಲಿ ಅನುಮೋದಿಸಿದ್ದು, ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 24 ಟಿಟಿಪಿ 2017, ಬೆಂಗಳೂರು, ದಿನಾಂಕ: 15.02.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳ ಆಧಾರದ ಮೇಲೆ ರಾಜ್ಯದಲ್ಲಿ ಭಾಗವಹಿಸುವಿಕೆಯ ನಗರಾಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಮಹಾಯೋಜನೆಯ ತಯಾರಿಕೆಯಲ್ಲಿನ ವಿಳಂಬವನ್ನು ತಪ್ಪಿಸಿ, ಸಂಕೀರ್ಣತೆಯನ್ನು ಕಡಿಮೆ ಮಾಡಿ, ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಿ, ಪ್ರಜಾಸತ್ತಾತ್ಮಕವಾಗಿ ನಾಗರೀಕರ ಪಾಲ್ಗೊಳ್ಳುವಿಕೆಯೊಂದಿಗೆ ಕಾರ್ಯರೂಪಕ್ಕೆ ತರುವುದು.
2. ನಾಗರೀಕರಿಗೆ ನಗರ ಯೋಜನಾ ತಯಾರಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು.
3. ಮಹಾಯೋಜನೆಯ ತಯಾರಿಕೆಯ ಪ್ರಾಥಮಿಕ ಹಂತದಲ್ಲಿ ನಾಗರೀಕರನ್ನು ತಲುಪಿ ಅವರು ವೈಯಕ್ತಿಕವಾಗಿ ಸಲಹೆ ಸೂಚನೆಗಳನ್ನು ನೀಡುವಂತೆ ತೊಡಗಿಸಿಕೊಳ್ಳುವುದು.
4. ಪ್ರತಿ ಭೂಮಿ, ನಿವೇಶನ ಹಾಗೂ ಮನೆಗಳ ಮಾಲೀಕರಿಂದ ನಗರದ ಪ್ರದೇಶಗಳನ್ನು ಹೇಗೆ ಬೆಳೆಸಬೇಕು, ಭೂಮಿಯ ಬಳಕೆಯನ್ನು ಯಾವುದಕ್ಕಾಗಿ ಮಾಡಬೇಕು, ವಸತಿಯಿಂದ ವಾಣಿಜ್ಯ ಉದ್ದೇಶಕ್ಕೆ ಹೇಗೆ ಪರಿವರ್ತಿಸಬೇಕು, ವಿಸ್ತರಿಸಬೇಕಾದ ಸೌಕರ್ಯಗಳ ಸ್ವರೂಪ ಇತ್ಯಾದಿಗಳನ್ನು ಪರಿಗಣಿಸಿ ಯೋಜನೆ ತಯಾರಿಸುವುದು.
5. ಯೋಜನಾ ಅಧಿಕಾರಿಯ ವ್ಯಕ್ತಿನಿಷ್ಠ ತೀರ್ಮಾನಕ್ಕಿಂತ, ಭೂಬಳಕೆಯ ಬಗ್ಗೆ ಮೂಲ ತೀರ್ಮಾನ, ತರ್ಕಬದ್ಧ ತತ್ವಗಳನ್ನು ಆಧರಿಸಿ ಉದ್ದೇಶಿತ ಮಾನದಂಡಗಳನ್ನು ಅಳವಡಿಸಿಕೊಳ್ಳುವುದರ ಮುಖಾಂತರ ವಾಸ್ತವ ಅಂಶಗಳನ್ನು ಪರಿಗಣಿಸಿದ ವಸ್ತು ನಿಷ್ಠ ತೀರ್ಮಾನವಾಗಬೇಕು. ವಸ್ತುನಿಷ್ಟ ಮಾನದಂಡ ಆಧಾರಿತ ನಿರ್ಧಾರಗಳು ಸಾಧ್ಯವಾಗದ ಪಕ್ಷದಲ್ಲಿ ನಾಗರೀಕರ ಮತ್ತು ಪಾಲುದಾರರ ಸಾಮೂಹಿಕ ಆಯ್ಕೆಗಳು ನಿರ್ಣಾಯಕ ಅಂಶಗಳಾಗಿರಬೇಕು.
6. ಭೂ ಬಳಕೆಯ ಆಯ್ಕೆಗೆ ಮತ್ತು ಭೂಮಿಯ ಮಿಶ್ರ ಬಳಕೆಗೆ ಸಂಬಂಧಿಸಿದಂತೆ ಅಥವಾ ಪ್ರತ್ಯೇಕ ಭೂ ಬಳಕೆ ಪ್ರದೇಶವನ್ನು ಇರಿಸಿಕೊಳ್ಳುವ ಬಗ್ಗೆ ಸ್ಥಳೀಯ ನೆರೆಹೊರೆಯ ನಾಗರೀಕರನ್ನು ಮತ್ತು ವಾರ್ಡ್ ಸಮಿತಿಗಳನ್ನು ಒಳಗೊಂಡಂತೆ ತೀರ್ಮಾನಿಸಬೇಕು.

7. ನಾಗರೀಕರ ಸಲಹೆಗಳಿಗೆ ಆದ್ಯತೆ ನೀಡುವಂತೆ ಮತ್ತು ಅವರ ಸಲಹೆಗಳನ್ನು ಮಹಾಯೋಜನೆಯಲ್ಲಿ ಅಳವಡಿಸುವಂತೆ ಮಾಡುವ ನಾಗರೀಕರ ಸಲಹಾ ಶೋಧನಾ ಗುಂಪನ್ನು ರಚಿಸುವುದು.
8. ಪಾಲುದಾರರ ಉಪಸ್ಥಿತಿಯಲ್ಲಿ ಕರಡು ಮಹಾಯೋಜನೆಗೆ ಆಕ್ಷೇಪಣೆಗಳ ವಿಲೇವಾರಿ ಮಾಡುವುದು.
9. ಸರಿ ಹೊಂದುವ ಮಹಾಯೋಜನೆಯ ತಯಾರಿಕೆ ಅಥವಾ ಪರಿಷ್ಕರಣೆಗೆ ಪ್ರತಿಕ್ರಿಯೆ ಪಡೆಯುವುದು ಮತ್ತು ಮೌಲ್ಯ ಮಾಪನ.

ಹೊಂದಾಣಿಕೆಯ ದೃಷ್ಠಿಯಿಂದ ಮಹಾಯೋಜನೆಯಿಂದ ಸೂಕ್ಷ್ಮ ಯೋಜನೆಗಳನ್ನು ಪ್ರಸ್ತಾವಿಸಿದ ನಗರಗಳಲ್ಲಿ ಈ ಭಾಗವಹಿಸುವಿಕೆಯ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 370 Exp-9/2017, ದಿನಾಂಕ: 02.06.2017 ಮತ್ತು ಟಿಪ್ಪಣಿ ಸಂಖ್ಯೆ: ಆಇ 731 ವೆಚ್ಚ-9/2017, ದಿನಾಂಕ: 29.11.2017ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
6. ನಿರ್ದೇಶಕರು, ನಗರ ಹಾಗೂ ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ಇವರಿಗೆ, ಪ್ರಕರಣ ಸಂಖ್ಯೆ:ಸಿ:12/2018ನ್ನು ಉಲ್ಲೇಖಿಸಿ ಮಾಹಿತಿ / ಅಗತ್ಯ ಕ್ರಮಕ್ಕಾಗಿ.
8. ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
9. ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
10. ಮಾನ್ಯ ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
11. ಶಾಖಾ ರಕ್ಷಾ / ಹೆಚ್ಚುವರಿ ಪ್ರತಿ.